ಅ) ಬೆಂಗಳೂರಿನಲ್ಲಿ ಹಳೇ ವಾಹನಗಳ ಓಡಾಟದ ಮೇಲೆ ಯಾವುದೇ ರೀತಿಯ ನಿರ್ಬಂಧವನ್ನು ಹಾಕುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಆದ್ದರಿಂದ ಹಳೇ ಸರಕು ಸಾಗಣೆ ವಾಹನ ಮತ್ತು ಬಸ್ಸುಗಳ ಸಂಖ್ಯೆಯ ಬಗ್ಗೆ ಸಾಂಖ್ಯಿಕ ಮಾಹಿತಿಯನ್ನು ಕ್ರೋಡೀಕರಿಸಿರುವುದಿಲ್ಲ. ವಾಹನದ ವಾಯು ಮಾಲಿನ್ಯವು ಹತೋಟಿಯಲ್ಲಿದೆ ಎಂಬ ಬಗ್ಗೆ ತಪಾಸಣೆ ನಡೆಸಲು ಹಾಗೂ ದೃಢೀಕರಣ ಪತ್ರವನ್ನು ಕೇಳಿ ಪಡೆಯಲು ಸಾರಿಗೆ ಹಾಗೂ ಪೋಲೀಸ್ ಇಲಾಖೆಗಳಿಗೆ ಸ್ಥಾಯಿ ಸೂಚನೆಗಳಿರುತ್ತದೆ.

ಆ) 'ಅ' ಉತ್ತರದಿಂದಾಗಿ ಉದ್ಭವಿಸುವುದಿಲ್ಲ.

ಕೊಪ್ಪಳ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ.

೮೩೨-ಶ್ರೀ ಸಂಗಣ್ಣ ಅಮರಪ್ಪ ಕರಡಿ (ಕೊಪ್ಪಳ) ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಪ್ಪಳ ನಗರಕ್ಕೆ ಕುಡಿಯುವ ನೀರನ್ನು ಒದಗಿಸಲು ೧೯೮೩ ರಲ್ಲಿ ತುಂಗಾಭದ್ರಾ ನದಿಯಿಂದ ಮೊದಲ ಹಂತದ ಯೋಜನೆಗೆ ಸರಕಾರ ಅನುಮತಿ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲು ಕಾರಣಗಳೇನು?

ಇ) ಈ ಯೋಜನೆಯನ್ನು ಪ್ರಾರಂಭಿಸದೇ ಇರುವುದರಿಂದ ನಗರ ವಾಸಿಗಳಿಗೆ ಕುಡಿಯುವ ನೀರಿನ ತೊಂದರೆ ಜಾಸ್ತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಸರ್ಕಾರ ಹಾಕಿಕೊಂಡ ಕಾರ್ಯಗಳೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು)

ಅ) ಸರ್ಕಾರವು ಯೋಜನೆಯನ್ನು ೧೯೯೦ ರಲ್ಲಿ ಮಂಜೂರು ಮಾಡಿದೆ.

ಆ) ಕಾಮಗಾರಿ ಪ್ರಾರಂಭಿಸಿದೆ ಹಾಗೂ ಪ್ರಗತಿಯಲ್ಲಿದೆ.

ಇ) ಕೆಲಸಗಳು ನಿರೀಕ್ಷಿಸಿದ ಮಟ್ಟದಲ್ಲಿ ಪ್ರಗತಿಯಲಿಲ್ಲವಾಗಿ ಸ್ವಲ್ಪ ಮಟ್ಟಿಗೆ ತೊಂದರೆಯಾಗಿದೆ.

ಈ) ಕಿರು ನೀರು ಯೋಜನೆ ಮತ್ತು ಕೊಳವೆ ಬಾವಿಗಳಿಗೆ ಕೈ ಪಂಪು, ವಿದ್ಯುತ್ ಪಂಪು ಗಳನ್ನು ಅಳವಡಿಸಿ ನೀರಿನ ಸರಬರಾಜು ಮಾಡುವ ತೊಂದರೆಯನ್ನು ಸುಧಾರಿಸಲಾಗಿದೆ.

ಚಿಕ್ಕಮಗಳೂರು ಪುರಸಭೆಗೆ ಅಭಿವೃದ್ಧಿ ಯೋಜನಗೆ ಹಣ ಬಿಡುಗಡೆ.

೧೦೪೧- ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಚಿಕ್ಕಮಗಳೂರು) ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

೧. ಚಿಕ್ಕಮಗಳೂರು ನಗರಸಭೆಗೆ ೧೯೯೩-೯೪ ಮತ್ತು ೧೯೯೪-೯೫ನೇ ಸಾಲಿನಲ್ಲಿ ಸರ್ಕಾರ ಸಣ್ಣ ಮತ್ತು ಮಧ್ಯಮ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿರುವ ಹಣವೆಷ್ಟು?